ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 317.

ಮೃತಪಟ್ಟು, ಚಿಕ್ಕೆಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಕೆಂಪಮ್ಮನು, ಮೃತಪಟ್ಟ ಸದರೀ ಚಿಕ್ಕೆಗವುಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾ ಲ್ಲೂಕು ಲಿಂಗಾಂಬುದಿ ಹೋಬಳಿ ಕುಂಬಾರ ಕೊಪ್ಪಲ್ ಸ್ಥಳದ ಸದರೀ ಕೆಂಪಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕೆಗವುಡರ ಜೊಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿ ಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕೆಂಪಮ್ಮನ ಅರ್ಜಿಯನ್ನು 1890ನೇ ಇಸವಿ ಡಿಶಂಬರ್ ತಿಂಗಳು ತಾರೀಖು 19ರಲ್ಲು ಕೇಳಿ ಸರ ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕೆಗವುಡರ ಆಸ್ತಿಗೆ ಹಕ್ಕುದ್ಯ ರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಅರ್ಜೀ ನಂಬರ್ 325.

ಮೃತಪಟ್ಟ ತುಕಡೀದಾರ ಸುಬ್ಬಾಜಟ್ಟೆಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣಾಜಪ್ಪನವರು, ಮೃತಪಟ್ಟ ಸದರೀ ಸುಬ್ಬಾಜಟ್ಟೆಪ್ಪನವರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲ್ಲಾ ಸ್ಥಳದ ಸದರೀ ಕೃಷ್ಣಾಜಪ್ಪನವರು ಸದರೀ ವಾಸಸ್ಥನಾಗಿ ಮೃತಪಟ್ಟ ಸುಬ್ಬಾಜಟ್ಟೆಪ್ಪನವರ ಜೊಂದಗಿ ಬ ಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಾಜಪ್ಪನವರ ಅರ್ಜಿಯನ್ನು 1891ನೇ ಇಸವಿ ಜನವರಿ ತಿಂಗಳು ತಾರೀಖು 7ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಜಟ್ಟೆಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ನವಂಬರ್ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರ್ ದೊಡ್ಡಪ್ಯಾಟೇಲಿ ಇರುವ ಶ್ರೀರಾಮತಿಪ್ಪಕಟ್ಟಯ ವಿಷಯದಲ್ಲಿ—

ಸ್ ಱ 1890ನೇ ಇಸವಿ ದಿವಾಳೀ ಕೇಸ್ ನಂಬರ್ 223.

ಹುಕುಂ,

ಮೇಲ್ಕಂಡ ಶ್ರೀರಾಮತಿಪ್ಪಕಟ್ಟಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬ ರೂ ಅರ್ಜೀದಾರನಾದ ತಿಪ್ಪಕಟ್ಟಯ ಪರವಾಗಿ 1ನೇ ಗ್ರೇಡ್ ಪ್ಲೀಡರ್ ಸುಬ್ಬರಾಯರುನ್ನು ಮತ್ತು ಸದರೀಯವನ ಲೇಣೇದಾರ್‌ರಾದ 5ನೇ ಅಳಿಂಗಾಚಾರ್ರ ತರಫ ಅಡ್ವೋಕೆಟ್ ನಾರಣಯ್ಯಂಗಾರ್ರು 1ನೇ ಇನ್ಸ್ಯಾಲ್‌ಕೆಟ್ 9ನೇ ಬುರ್ಜಸಾಬರು 11ನೇ ವಿಟಲದಾಸ ಕೆಟ್ಟೆರಿಗೂ ದರ್ಯಾಸ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಆಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—2ನೇ ನಂಜುಂಡಯ್ಯ 3ನೇ ತಿಮ್ಮಪ್ಪ 4ನೇ ಲೈಫ್ ಇಷ್ಯೂರೆನ್ಸ್ ಬ್ಯಾಂಕ್ 6ನೇ ಲಕ್ಷ್ಮೀಪತಯ್ಯ 7ನೇ ಮಂಗರ್‌ಮಲ್‌ಕೆಟ್ 8ನೇ ಸರ್ವಜನವರ್ಧನೀ ಬ್ಯಾಂಕು 10ನೇ ಕೃಷ್ಣಪ್ಪ 12ನೇ ರುದ್ರಪ್ಪ 13ನೇ ಅದವ್ಮ 14ನೇ ಅಪ್ಪಾವುಕಟ್ಟರು 15ನೇ ಕರಪಂಣ 16ನೇ ವೀರಾಸಾಮಿಕಟ್ಟೇ ಕಂಪನೀ 17ನೇ ಬುರ್ಜಮಾಳವಾರ್‌ಕಟ್ಟೆ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮೈಸೂರು ದೊಡ್ಡಪ್ಯಾಟೇಲಿ ಇರುವ ಶ್ರೀರಾಮ ತಿಪ್ಪಕಟ್ಟಯು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇಪಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋ ಸ್ಥರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ ಱ 1890ನೇ ಇಸವಿ ನವಂಬರ್ 25ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡೋಣಾಗಿಧೆ.

ಸೂಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ತೊಬಲಗು.	ಯಾವಾಗ ದೇಣೇ ಉಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	5ನೇ ಮೈಸೂರು ಎತಿರಾಜಸಂಪತ್ತು ಮಾರ ಬ್ಯಾಂಕ್ ಪಿಜಂಟ್ ಅಳಕಿಂಗ್ಯಾಚಾರ್	372 11 9	..	ಡಿಕ್ರೀ ಬಾಬತು	

ಎಂ. ರಾಮಸ್ವಾಮ್ಯೆಯ್ಯರ್,
ಸಬ್ ಜಡ್ಜ್.

ನೋಟಿಫಿಕೇಷನ್.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮೂರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡಲೇ ಬರೆದುಕೊಳ್ಳತಕ್ಕದ್ದು. ಈ ಆನೆಯನ್ನು ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ.		ಹಿಡಿಯಲ್ಪಟ್ಟ ತಾರೀಖು.
		ಅಡಿ.	ಅಂಗೆಲ	
ಕಲ್ಯಾಣಿ	ಹೆಣು	7	4	28—6—86.

ಷರಾ.—ಈ ಆನೆಯು ಚೆನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ಒಳ್ಳೇ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ಉಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮಸ್ವಾಮಿ ಐಯ್ಯರ್,
ಆಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಮೈಸೂರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 166.

ಮೃತಪಟ್ಟ ಬಾಬಣ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಪೇಟೇ ಸುಬ್ಬರಾಯರು, ಮೃತಪಟ್ಟ ಸದರೀ ಬಾಬಣ್ಣಯ್ಯನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ತೀರ್ಥಹಳ್ಳಿ ಸ್ಥಳದ ಪೇಟೇ ಸುಬ್ಬರಾಯರು ತೀರ್ಥಹಳ್ಳೀ ವಾಸಸ್ಥರಾಗಿ ಮೃತಪಟ್ಟ ಬಾಬಣ್ಣಯ್ಯನವರ ಜಿಂದಗಿ ಬಗ್ಯಾಗಿ ಒರತಕ್ಕ (800) ರೂಪಾಯಿ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪೇಟೇ ಸುಬ್ಬರಾಯರ ಅರ್ಜಿಯನ್ನು 1891ನೇ ಇಸವಿ ಜನವರಿ ತಿಂಗಳು ತಾರೀಖು 9ರಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಾಬಣ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತ ಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಡಿಸ್ಟ್ರಿಕ್ಟ್ ಜಡ್ಜ್.